ಕಣ್ಣು ಮುಚ್ಚಿ ಹಲ್ಲಚ್ಚಿ ಮಲಗಿದ್ದಳಂತೆ. ಆ ದಿನ ರಾತ್ರಿ ನಾನೂ ಎಚ್ಚರವಾಗೇ ಇದ್ದೆ. ಅವ್ವನ ಎದೆ ಜೋರಾಗಿಯೇ ಹೊಡೆದುಕೊಳ್ಳುತ್ತಿತ್ತು. ನಮ್ಮನೆಯ ಪಕ್ಕದಲ್ಲಿದ್ದ ಬಾವಿಯಿಂದ ಬಾವಲಿಗಳು ಒಂದೇ ಸಮನೆ ಎದ್ದು ಬರುವ ಶಬ್ದ ಕೇಳುತ್ತಿತ್ತು. ಮನೆಯ ಮುಂದೆ ಮಲಗಿದ್ದ ಮೊಂಡ ನಾಯಿ ಎತ್ತೆತ್ತಲೋ ತಿರುತಿರುಗಿ ಬೊಗಳುತ್ತಿತ್ತು. ಕತ್ತಲೆ ಎಲ್ಲವನ್ನು ಒಳಗೆಳೆದುಕೊಂಡಿತ್ತು. ಅತ್ತ ಸಿದ್ಧಣ್ಣನ ಬೈಗುಳ, ಇತ್ತ ನಾಯಿಗಳ ಬೊಗಳು ಎರಡೇ ಕಿವಿ ತುಂಬ ತುಂಬೋಗಿದ್ದವು.

ಬೆಳಗ್ಗೆ ಹೊತ್ತುಟ್ಟುವ ಮೊದಲೇ ಎಲ್ಲರ ಬಾಯಲ್ಲಿ ಇದೇ ವಿಚಾರ ಹರಿದಾಡಿತು. 'ಅವ್ನು ಅಂತವ್ನಲ್ಲ.. ಆದ್ರೂ ಹಿಂಗ್ಯಾಕಾದ' ಎನ್ನುವುದರೊಂದಿಗೆ ಶುರುವಾಗಿ, 'ಬಿಡು ಬಿಡು ಹೆಣ್ಣು ಮಾಯ್ಯಾರ್ತಿ' ಎನ್ನುವುದರೊಂದಿಗೆ ಮುಗಿಯುತ್ತಿದ್ದವು. ಆದರೆ, ಕೇಳುವ ಧೈರ್ಯವನ್ನು ಯಾರೂ ಮಾಡಲಿಲ್ಲ. ಸಿದ್ಧಣ್ಣನ ವಿರುದ್ಧ ನಿಂತರೆ ಹತ್ತಾರು ಪುಂಡೈಕ್ಳು ಜೊತೆಯಾಗಿ ಬಂದುಬಿಡ್ತವೆ ಅಂತ ಎಲ್ರಿಗೂ ಗೊತ್ತಿತ್ತು. ಬೆಳ್ಳಂಬೆಳಗ್ಗೆಯೇ ಅವ್ವನ ತಂಗಿ ಕಾಳವ್ವ, 'ಇದೆಲ್ಲ ಏನವ್ವ' ಎಂದು ಅವ್ವನನ್ನು ವಿಚಾರಿಸುತ್ತಾ ಒಳಬಂದಳು. ಆಗ ಅವ್ವ... 'ಅಯ್ಯೋ ಅವ್ನು ನಂಗೊತ್ತಿರೋವಂಗೆ ಅಂತವ್ರಲ್ಲ ಕಣವ್ವ, ಇವ್ರೆಲ್ಲ ಬಾಯಿಮುಚ್ಚಿಕೊಂಡು ಸುಮ್ಕಿದ್ರೆ ಆಯ್ತದೆ' ಎಂದು ಹೇಳುತ್ತಾ, 'ಸಿದ್ಧಣ್ಣನೇನೋ ಕಮಲಕ್ಕನ್ನ ಕಮಲಕ್ಕ ಅಂತನೇ ಮಾತಾಡ್ಸಿದ್ದ, ಒಂದ್ಸಾರಿ ಹೊಲ ಕುಯ್ಯೋಕೆ ಆಳುಗಳ್ಯಾರೂ ಸಿಗ್ಲಿಲ್ಲ... ಸಿದ್ಧಣ್ಣ ಒಬ್ನೇ ಕಮಲಕ್ಕನ ಹೊಲಾನ ಕುಯ್ದ... ಒಂದೆರಡು ದಿನ ಅಲ್ಲ ಒಂದ್ವಾರ. ಆಗ ಕಮಲಕ್ಕನೇ ದಿನಾ ಊಟ ಹೊತ್ಕೊಂಡೋಗೋಳು.. ಅವಳವ್ವ ಜಯವ್ವ, 'ಹೋಗ್ಲಿ ಬಿಡೋ... ಜನಾ ಬಂದಾಗ್ಲೆ ಕುಯ್ವ' ಎಂದರೂ ಅವನು ಕೇಳ್ಳಿಲ್ಲ. ಕಮಲಕ್ಕನ ಗಂಡ ಸಣ್ಣಯ್ಯ ಅದ್ಕೂ ನಂಗೂ ಸಂಬಂಧವೇ ಇಲ್ಲ ಅನ್ನಂಗೆ ತಿರುಗಾಡ್ಕೊಂಡಿದ್ದ. ಜನ ವಿಚಿತ್ರವಾಗಿ ಮಾತಾಡೋಕೆ ಸುರುಮಾಡುದ್ರು... ಇದು ಕಿವಿಯಿಂದ ಕಿವಿಗೆ ಬಿದ್ದು ಊರಲ್ಲಿ ಇವರಿಬ್ರು ಬಗ್ಗೆನೇ ಮಾತಾಡ್ಕೊಳ್ಳುವಂಗೆ ಆಯ್ತು' ಎಂದು ಹೇಳುತ್ತಾ, 'ನೋಡು ಊರು ನರಿ ಹೋದ್ರೆ ಹುಲಿ ಹೋಯ್ತು ಅಂತನೇ ಹೇಳ್ತಾದೆ' ಎನ್ನುತ್ತಾ ಕಣ್ಣಾಗಿನ ನೀರನ್ನು ಒರೆಸಿಕೊಂಡಳು. ಹತ್ತಿರದಲ್ಲೇ ಇದ್ದ ನನ್ನನ್ನು ನೋಡಿ, 'ಒಂದಿಷ್ಟು ನೀರು ಕೊಡು ಮಗಾ' ಎನ್ನುತ್ತಾ ನಾನು ಕೊಟ್ಟ ನೀರು ಕುಡಿದು, 'ನಾವೆಷ್ಟೇ ನಿಯತ್ತಾಗಿದ್ರು ಊರವರೆಲ್ಲ ಹಿಂಗಾಂತಾರಲ್ಲ... ನಾವೆಷ್ಟೇ ಬಾಯಿಬಡಿದುಕೊಂಡ್ರು ಇವ್ರು ನಂಬಲ್ರು... ಏನ್ಮಾಡೋದು ಅಂತ ಆವಾಗಿಂದ



ಚಿಂತೆ ಮಾಡ್ತಾನೇ ಅವ್ರೆ ಅವ್ರು' ಎಂದು ಹೇಳಿ ಮಾತು ನಿಲ್ಲಿಸಿದಳು. ನಾನು ಅವ್ವನ ಕಣ್ಸನ್ನೆ ಮೇರೆಗೆ ನೀರೊಲೆಗೆ ಉರಿಯಾಕಲು ಹೊರಟೆ. ಮುಂದಿನ ಮಾತು ಕಿವಿಗೆ ಬೀಳಲಿಲ್ಲ.

ಅದೇ ದಿನ ಸಂಜೆ ಅಣ್ಣನೂ ಬಂದನು. ಏನೂ ಮಾತಾಡಲಿಲ್ಲ. ಊಟ ಮಾಡಿ ಎಂದಿನಂತೆ ಗೌಡರ ಕೇರಿಯತ್ತ ನಡೆದನು. ಅವ್ವ ನಿಡಿದಾಗಿ ಉಸಿರುಬಿಟ್ಟಳು. ಅವ್ವನಿಗೆ ಕಮಲಕ್ಕನ ಬಗ್ಗೆ ಕೊಂಚ